‘ರಾಧೇ

ಆಕೆ ಭಕ್ತೆ, ಆಕೆ ಪ್ರೇಮಿ ಆದರೆ ಆಕೆ ಚಿರವಿರಹಿ, ಆಕೆ ತಪ್ತೆ, ಆಕೆ ಪರಿತ್ಯಕ್ತೆ, ಆಕೆ ರಾಧೆ!

ಲೋಕದ ಕಣ್ಣಿಗೆ ರಾಧೆಯೂ ಕೂಡ । ಎಲ್ಲರಂತೆಯೇ ಒಂದು ಹೆಣ್ಣು ॥
ನನಗೋ ಆಕೆ ಕೃಷ್ಣನ ತೋರುವ । ಪ್ರೀತಿಯು ನೀಡಿದ ಕಣ್ಣು ॥

ಆಕೆ ಕೃಷ್ಣನನ್ನು ಕಾಣಲು, ಅವನನ್ನು ಸೇರಲು ಪ್ರೀತಿಯೇ ನೀಡಿರುವ ಕಣ್ಣು, ಯಾಕೆಂದರೆ ಸ್ವತಹ ಪ್ರೇಮವೇ ಕುರುಡು. ಕೃಷ್ಣನಂತಹ ಪ್ರೇಮರೂಪಿಯನ್ನು ಸೇರಲು ಕುರುಡು ಪ್ರೇಮವನ್ನು ನಂಬಿದವರಿಗೆ ಅದು ನೀಡಿರುವ ಕಣ್ಣು ರಾಧೆ!

ತಿಂಗಳ ರಾತ್ರಿ ತೊರೆಯ ಸಮೀಪ । ಉರಿದರೆ ಯಾವುದೋ ದೀಪ ॥
ಯಾರೋ ಮೋಹನ ಯಾವ ರಾಧೆಗೋ । ಪಡುತಿರುವನು ಪರಿತಾಪ ॥

ಹುಣ್ಣಿಮೆ ರಾತ್ರಿಯಲ್ಲಿ ನದೀತೀರದಲ್ಲಿ ಉರಿಯುತಿರುವ ದೀಪವಾಗಿ ಅವನು ಕಾಯುತಿದ್ದಾನೆ, ಬಾರದ ರಾಧೆಗಾಗಿ. ಅಕೆಯೆಲ್ಲಿ ಬಂದಾಳೆಯೇ? ಆಕೆ ರಾಧೆಯರಿಗಾಗಿ ಕಾಯುವ ಎಲ್ಲ ಮೋಹನರಿಗೂ ಆಕೆ ಪ್ರೇಮದ ವೃಂದಾವನವನ್ನು ಸೇರುವ ಸಮಸ್ಯೆಗೆ ತಾನೇ ಉತ್ತರವಾಗಿ ನಿಂತು ದಾರಿ ತೋರಿಸುತ್ತಾಳೆ.

ನಾನು ನನ್ನದು ನನ್ನವರೆನ್ನುವ । ಹಲವು ತೊಡಕುಗಳ ಮೀರಿ ॥
ಧಾವಿಸಿ ಸೇರಲು ಬೃಂದಾವನವ । ರಾಧೆ ತೋರುವಳೀ ದಾರಿ ॥

ನಾನು, ನನ್ನದು, ನನ್ನವರು ಎನ್ನುವ ಸಮಾಜದ ಎಲ್ಲ ಕಟ್ಟಳೆಗಳನ್ನು ಮೀರಿ ನೀವು ಪ್ರೇಮದ ವೃಂದಾವನವನ್ನು ಸೇರಬೇಕು–ಶ್ರೀಕೃಷ್ಣನಲ್ಲಿ ಒಂದಾಗಲು ರಾಧೆಯೇ ದಾರಿ. ಅವಳ ನಿರ್ವಾಜ್ಯ ಪ್ರೇಮವೇ ರಾಜಮಾರ್ಗ. ಯಾಕೆ ರಾಧೆಯ ಪ್ರೇಮ ಅಮರವಾದುದು, ಅತೀ ಶ್ರೇಷ್ಠವಾದುದು ಅನ್ನುವುದಕ್ಕೆ ಇಲ್ಲಿದೆ ನೋಡಿ ವಿವರಣೆ –

ಮಹಾಪ್ರವಾಹ ತೊರೆಯುವರಿಲ್ಲ । ಪಾತ್ರವಿರದ ತೊರೆ ಪ್ರೀತಿ ॥
ತೊರೆಯದೇ ತನ್ನ ತೊರೆಯದು ಪ್ರಿಯನ । ರಾಧೆಯ ಪ್ರೀತಿಯ ರೀತಿ ॥

ಭಗವಂತನೆಡೆಗೆ ಅವಳ ಪ್ರೀತಿ, ಕಾಪಾಡಲು ಯಾರೂ ಇಲ್ಲದೇ ಪ್ರವಾಹದಲ್ಲಿ ಕೊಚ್ಚಿ ಹೋಗುವಂತದ್ದು, ಅದು ದಡಗಳೇ ಇಲ್ಲದೇ ಉಕ್ಕಿ ಹರಿಯುವ ನದಿಯಂತದ್ದು. ತನ್ನನ್ನು ತಾನು ಮೊದಲು ತೊರೆಯದೇ (ತಾನು ಗತಿಸದೇ) ಪ್ರಿಯನನ್ನು–ಅವನ ಪ್ರೇಮವನ್ನು ತೊರೆಯಲಾರದಂತದ್ದು.

ರಾಧೆ ಕೃಷ್ಣನ ಮೊದಲ ಪ್ರೇಮ. ಆಕೆ ಅವನಿಗಿಂತ ಹಿರಿಯಳು, ಮುಕುಂದನ ಬೇರೆ ಪ್ರೇಮಿಕೆಯರೆಲ್ಲ ಪ್ರೇಮಿ–ಹೆಂಡತಿಯರಾಗಷ್ಟೇ ಉಳಿದರು. ಅವಳು ಅವನ ಅಕ್ಕರೆಯ ಸ್ನೇಹಿತೆಯಾದಳು, ಅವನೆಲ್ಲ ಗುಣಗಳನ್ನು ಅರ್ಥೈಸಿಕೊಂಡ ಅಮ್ಮನಾದಳು, ಸಖಿಯಾದಳು, ಭಕ್ತೆಯಾದಳು, ಪ್ರೇಮಿಯಾದಳು. ಉಳಿದವರೆಲ್ಲ ಅವನ ದ್ವಾರಕೆಯ ಮಹಲುಗಳಲ್ಲಿ ಕಳೆದುಹೋದರು; ಅವನ ಪ್ರೀತಿಗಾಗಿ, ಅದರ ಪ್ರದರ್ಶನಕ್ಕಾಗಿ ಪೈಪೋಟಿ ನಡೆಸಿದರು. ಆದರೆ ಆದರೆ ರಾಧೆ ಮನೆ ತುಂಬಾ ಮಕ್ಕಳಿರುವ ಮನೆಯಲ್ಲಿ ಅಮ್ಮನ ಪ್ರೀತಿಗಾಗಿ ಪೈಪೋಟಿ/ಗದ್ದಲ ನಡೆಸುವ ಮಕ್ಕಳ ನಡುವೆ, ಅಳದೇ ಸುಮ್ಮನಿರುವ ಮಗುವಿನಂತೆ ಸುಮ್ಮನಿದ್ದುಬಿಟ್ಟಳು. ಅವನು ಮಥುರೆಯನ್ನು ಬಿಟ್ಟು ದ್ವಾರಕೆಗೆ ಹೊರಟಾಗ, ಅವನು ಅವಳನ್ನು ಸಂಧಿಸಿದನೇ? ಅವಳನ್ನು ಜೊತೆಗೆ ಕರೆದನೆ? ಅವಳು ಅವನನ್ನು ಹಿಂಬಾಲಿಸಿ ಹೋಗಲಿಲ್ಲ, ಮಥುರೆಯನ್ನು ಬಿಡಲಿಲ್ಲ. ನದೀ ತೀರದ ಕುಟೀರದಲ್ಲಿ ಆಕೆಯ ವಾಸ, ಆಕೆಯ ತಪಸ್ಸು, ತಪನೆ ಎಲ್ಲವೂ. ಗದ್ದಲಮಾಡುವ ಎಲ್ಲ ಮಕ್ಕಳನ್ನು ಸಂತೈಸಿದ ನಂತರ ಸುಮ್ಮನೆ ಮೂಲೆಯಲ್ಲಿ ತನ್ನ ಪ್ರೀತಿಗಾಗಿ ಕಾದುಕುಳಿತ ಮಗುವನ್ನು ಬಾಚಿ ಬರಸೆಳೆದು ಪ್ರೀತಿಯ ಮಳೆಗೈಯ್ಯುವ ಅಮ್ಮನಂತೆ ಶ್ರೀಕೃಷ್ಣ ಬಂದೇ ಬರುತ್ತಾನೆ ಎಂದು ಕಾದಳು, ತನ್ಮೂಲಕ ಪ್ರೇಮದ ಸಾರ್ಥಕ್ಯವನ್ನು ಕಂಡುಕೊಂಡಳು, ರಾಧೆಯಾದಳು. ಗೋಪಾಲನೂ ಅಷ್ಟೇ. ಹದಿನಾರು ಸಾವಿರ ಹೆಂಡತಿಯರಿದ್ದೂ, ಆರುಜನ ಪಟ್ಟಮಹಿಷಿಯರಿದ್ದೂ ಅವನು ರಾಧೆಯ ಪ್ರೀತಿಯನ್ನು ಅದರ ರೀತಿಯನ್ನು ಕೊನೆವರೆಗೂ ನೆನೆದ, ಅದರಲ್ಲೇ ತೊಯ್ದುಹೋದ. ರಾಧೆಯಿಂದಾಗಿಯೇ ಅವನು ಪ್ರೇಮರೂಪಿಯಾದ. ಕೊನೆಗೆ ರಾಧೇಯನೂ, ರಾಧಾಕೃಷ್ಣನೂ ಆದ! (ರುಕ್ಮಿಣೀಕೃಷ್ಣನೂ ಅಲ್ಲ, ಭಾಮಾಕೃಷ್ಣನೂ ಅಲ್ಲ)

(ಮೇಲಿನ ಸುಮಧುರ, ಮನೋಹರ ಪ್ರೇಮಗೀತೆಯ ಕರ್ತೃ ಎಚ್. ಎಸ್. ವೆಂಕಟೇಶಮೂರ್ತಿಯವರು)